ಶ್ರೀ ಕೆ. ಕೆ. ಗಣಪತಿ.—ಮೈಸೂರಿನಲ್ಲಿಯ ಯಾವ ರೈಲ್ವೆಸ್ಟೇಷನ್ನಿನಿಂದ ಕೊಡಗಿನ ಯಾವ ರೈಲ್ವೆಸ್ಟೇಷನ್ನಿನವರೆಗೆ ರೈಲ್ವೆ ಲೈನಿನ ಸರ್ವೆ ಮಾಡಬೇಕೆಂದಾಗಿದೆ?

ಶ್ರೀ ಸಿ. ಎಂ. ಪೂಣಚ್ಚ.—ಸರ್ವೆ ನಡೆದಿದೆ. ಎಲ್ಲಿಂದ ಎಲ್ಲಿಯವರೆಗೆ ಎಂದು ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಕೆ. ಗಣಪತಿ.—ಮೈಸೂರಿನಲ್ಲಿ ಎಲ್ಲಿಂದ ಸರ್ವೆ ಮಾಡುವಿರಿ ?

ಶ್ರೀ ಸಿ. ಎಂ. ಪೂಣಚ್ಚ.—ಬೇಕಾದರೆ ಈ ಮಾಹಿತಿಯನ್ನು ಸಂಗ್ರಹಿಸಿ ಹೇಳಲಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ರೈಲ್ವೆ ಲೈನ್ ರಚನೆಯ ಸಂಬಂಧದಲ್ಲಿ ಎಷ್ಟು ಹಣ ಮಂಜೂರಾಗಿ ಕೊಡಲಾಗಿದೆ ?

ಅಧ್ಯಕ್ಷರು.—ಅದು ಬೇರೆ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗುವುದಿಲ್ಲವೆ ?

ಶ್ರೀ ಕೆ. ಕೆ. ಗಣಪತಿ.—ಮೈಸೂರು ಸರ್ಕಾರವು ಯಾವ ಪಾಲಿಸಿಯನ್ನು ಇಟ್ಟುಕೊಂಡಿದೆ ?

ಅಧ್ಯಕ್ಷರು.—ಅದು ಕೇಂದ್ರ ಸರ್ಕಾರದ ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿದೆ.

ಶ್ರೀ ಕೆ. ಕೆ. ಗಣಪತಿ.—ಮೈಸೂರು ರಾಜ್ಯದಲ್ಲಿ ಯಾವ ಯಾವ ರೈಲ್ವೆ ಲೈನ್ ರಚನೆಯ ಕೆಲಸ ಸಾಧನೆಯಾಗಿಲ್ಲವೋ ಅಂಥವುಗಳ ರಚನೆಯ ಬಗ್ಗೆ ಸರ್ಕಾರದವರು ಯಾವ ಪಾಲಿಸಿಯನ್ನಿಟ್ಟುಕೊಂಡಿದ್ದಾರೆ ?

ಅಧ್ಯಕ್ಷರು.—ಮೈಸೂರು ಸರ್ಕಾರ ಯಾವ ಹೊಸ ರೈಲ್ವೆ ಲೈನಿನ ಬಗ್ಗೆ ಶಿಫಾರಸು ಮಾಡಿದ್ದಾರೆ ಎಂದು ಪ್ರಶ್ನೆ ಕೇಳಬಹುದು.

ಶ್ರೀ ಬಿ. ಹುಚ್ಚೇಗೌಡ.—ಈ ಹೊಸ ರೈಲ್ವೆ ಲೈನಿನ ರಚನೆಯ ವಿಚಾರ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಮಾವೇಶಗೊಂಡು ಮೈಸೂರಿನಲ್ಲಿ ಸರ್ವೆ ಕೆಲಸ ಆಗುತ್ತಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ. ಇದನ್ನು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯ ಕರಡು ತಯಾರು ಮಾಡುವಾಗ ಮೈಸೂರು ಸರ್ಕಾರವು ಇದನ್ನು ಶಿಫಾರಸ್ಸು ಮಾಡಿತ್ತು.

ಶ್ರೀ ಕೆ. ಕೆ. ಗಣಪತಿ.—ಯಾವ ನಿರ್ದಿಷ್ಟವಾದ ಪ್ರದೇಶವನ್ನು ಗೊತ್ತುಮಾಡಿಕೊಂಡು ಸರ್ಕಾರವು ಸರ್ವೆ ಕೆಲಸವನ್ನು ಪ್ರಾರಂಭ ಮಾಡಿದೆ ?

Mr. SPEAKER—Order Order.

ಶ್ರೀ ಕೆ. ಕೆ. ಗಣಪತಿ.—ಕೊಡಗಿನಲ್ಲಿ ಸರ್ವೆ ಮಾಡುವಾಗ ಎಲ್ಲಿ ರೈಲ್ವೆ ಲೈನ್ ರಚನೆಯಾಗಬೇಕೆಂಬುದನ್ನು ನಿರ್ಧರಿಸಲಾಗಿದೆಯೇ ?

ಅಧ್ಯಕ್ಷರು.—ಇದು ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ.

School for Pariyarnagar.

Q.—451. **Sri R. MUNISWAMIAH** (Bangalore North—Scheduled Castes).—

Will the Government be pleased to state :—

(*a*) whether a school with two teachers has been sanctioned to the Pariyarnagar, Devarajeevanahalli, Kasaba Hobli, Bangalore North Taluk ;

(*b*) whether the people have not promised to arrange for a building of their own in that village ?

A.— **Sri Kadidal MANJAPPA** (Minister for Education).—

(*a*) No.

(*b*) The villagers are ready to meet half the cost of the building.

Sri R. MUNISWAMIAH.—Sir, I have no supplementaries.

Supply of Electric Power for Small-Scale and Rural Industries.

Q.—205. **Sri S. KARIYAPPA** (Virupakshapura).—

Will the Government be pleased to state :—

(*a*) whether it is a fact that the supply of electric power for small-scale industries or rural industries can only be made on the recommendation of the Department of Industries ;

(*b*) if so, when this arrangement was brought into vogue ;

(*c*) since the introduction of this new procedure, the number of applications received for supply of power for small-scale or rural industries ;

(*d*) the number of cases (*i*) that have been supplied with power and (*ii*) the number of cases in which supply of power has been refused ?

A.—**Sri H. K. VEERANNA GOWDH** (Minister for Public Works).—

(*a*) Yes.

(*b*) October 1956.

(*c*) 95.

(*d*) (*i*) 80.
(*ii*) 15.

ಶ್ರೀ ಎಸ್. ಕರಿಯಪ್ಪ.—ಸಣ್ಣಸಣ್ಣ ಉದ್ಯೋಗಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವಿಚಾರದಲ್ಲಿ ಈಗ ಅನುಸರಿಸಬೇಕೆಂದಿರುವ ಧೋರಣೆಯು ಬಹಳ ಅನಾನುಕೂಲವಾಗುವುದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯದ ಮಾತು.

ಶ್ರೀ ಎಸ್. ಕರಿಯಪ್ಪ.—ಹಾಗೆ ಅನುಸರಿಸಲಾಗುವುದೆಂದು ಅಪ್ಪಣೆ ಕೊಡಿಸಿದ್ದೀರಲ್ಲಾ ?